secondary Education):-

a) Yes, But one section in a TTI situated at Bethamangala of kolar District is conducting TCH course in Telugu Medium

b) Action will be taken after considering the necessity of opening one section in Telugu Medium in the TTIS' in Bellary.

ವಿಷಯ:- ಗ್ರಾಮಾಂತರ ಪ್ರದೇಶದಲ್ಲಿ ಗ್ರಂಥಾಲಯ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1706 (1952)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಪ್ರಾಥಮಿಕ ಮತ್ತು ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶದಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸರ್ಕಾರದ ಮುಂದೆ ಯಾವುದಾದರೂ ಯೋಜನೆ ಇದೆಯೇ?

ಆ) ಹಾಗಾದರೆ ಈ ವರ್ಷದ ಗುರಿ ಎಷ್ಟು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಸಚಿವರು):-

ಅ) ಹೌದು

ಆ) 1995-96ನೇ ಸಾಲಿನಲ್ಲಿ 100 ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಪ್ರಾರಂಭಿಸುವ ಯೋಜನೆ ಇರುತ್ತದೆ.

ವಿಷಯ:- ರಸ್ತೆ ಬದಿಯಲ್ಲಿರುವ ಹಳೆ ಮರಗಳ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1707 (1951)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಕುಣಿಗಲ್ ಹತ್ತಿರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸಿನ ಮೇಲೆ ಇತ್ತೀಚೆಗೆ ಒಂದು ಹಳೆಯ ಮರ ಬಿದ್ದುದರಿಂದ ಭಯಂಕರ ದುರಂತ ಸಂಭವಿಸಿದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇಂತಹ ಘಟನೆಗಳನ್ನು ತಡೆಯಲು ಸರ್ಕಾರವು ಯಾವುದಾದರು ಕ್ರಮವನ್ನು ಕೈಗೊಂಡಿದೆಯೆ;

ಶ್ರೀ ಹೆಚ್.ವೈ.ಮೇಟಿ (ಅರಣ್ಯ ಸಚಿವರು):-

ಅ) ಹೌದು ಇದು ಭಾರಿ ಮಳೆಯಿಂದ ಉಂಟಾದ ಅಪಘಾತವಾಗಿದೆ.

ಆ) ಹೌದು ಇಂತಹ ಅಪಘಾತಗಳನ್ನು ತಡೆಯಲು ಮರಗಳನ್ನು ಗುರುತಿಸಲು ಮತ್ತು ಅವುಗಳನ್ನು ತೆಗೆಯಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ವಿಷಯ:- ಪ್ರಾಥಮಿಕ ಶಾಲೆಗಳಿಗೆ ೨ ಜನ ಅಧ್ಯಾಪಕರಿರುವ ಬಗ್ಗೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1709 (2426)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಶಾಲೆಗಳಿಗೆ ಕಡಿಮೆ ಅಂದರೆ 2 ಜನ ಅಧ್ಯಾಪಕರು ಇರಲೇಬೇಕೆಂಬ ರೀತಿ ಇದೆಯೇ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ಜನ ಅಧ್ಯಾಪಕರಿಲ್ಲದ ಶಾಲೆಗಳೆಷ್ಟು;

ಇ) ಕರಿ ಹಲಗೆ ಯೋಜನೆಯಲ್ಲಿ 2 ಜನ ಅಧ್ಯಾಪಕರನ್ನಿಟ್ಟು ಉಳಿದ ಶಾಲೆಗಳಿಗೆ ಎರಡು ಜನ ಅಧ್ಯಾಪಕರು ಇರಬೇಕೆಂಬ ನೀತಿಯನ್ನು ಅನುಸರಿಸದಿರಲು ಕಾರಣವೇನು?

ಈ)ನಿಯುಕ್ತಿಯ ಮೇಲೆ ಎಷ್ಟು ಜನ ಅಧ್ಯಾಪಕರು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ; (ಸಂಪೂರ್ಣ ವಿವರವನ್ನು ಒದಗಿಸುವುದು);

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ)ಕಪ್ಪು ಹಲಗೆ ಕಾರ್ಯಕ್ರಮದ ಯೋಜನೆಯಡಿ ಆಳವಡಿಸಲಾಗಿರುವ ಶಾಲೆಗಳಲ್ಲಿ ಮಾತ್ರ ಕನಿಷ್ಟ 2 ಶಿಕ್ಷಕರು ಇರಬೇಕೆಂಬ ನಿಯಮ ಇದೆ.

ಆ) 48.

ಇ) ಎಲ್ಲಾ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆವಶ್ಯಕತೆ ಇದ್ದಷ್ಟು ಶಿಕ್ಷಕ ಹುದ್ದೆ ಮಂಜೂರಾಗದೆ ಇರುವುದರಿಂದ 2 ಜನ ಶಿಕ್ಷಕರಿರಲೇಬೇಕೆಂಬ ನೀತಿಯನ್ನು ಅನುಸರಿಸಲು ಸಾಧ್ಯವಾಗಿಲ್ಲ.

ಈ) 93 ಶಿಕ್ಷಕರು ನಿಯುಕ್ತಿಯ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ.

1. ಮಂಗಳೂರು ತಾ.	:	08
2. ಮಂಗಳೂರು ನಗರ	:	-
3. ಬಂಟ್ವಾಳ ತಾ.	:	09
4. ಬೆಳ್ತಂಗಡಿ ತಾ.	:	04
5. ಪುತ್ತೂರು ತಾ.	:	23
6. ಸುಳ್ಯ ತಾ:	:	30
7. ಉಡುಪಿ ದಕ್ಷಿಣ	:	01
8. ಉಡುಪಿ ಉತ್ತರ	:	02
9. ಕಾರ್ಕಳ ದಕ್ಷಿಣ	:	-
10. ಕಾರ್ಕಳ ಉತ್ತರ	:	04
11. ಕುಂದಾಪುರ ತಾ:	:	12

ವಿಷಯ:- ಕುಂದಾಪುರ ತಾಲ್ಲೂಕಿನ ಜ್ಯೂನಿಯರ್ ಕಾಲೇಜು ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1711 (2428)